ಅಸಲು ದಾವಾ ನಂ. 226/2022

ಪಿ ಡಬ್ಲು -2

ದಿನಾಂಕಃ 08-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ . ಕೆ ಜಿ ಎಸ್ ವಕೀಲರಿಂದ .**

ಸಾಕ್ಷಿಗೆ ದಾವೆಯ ಕಡತದಿಂದ ನಿಪಿ-14 ಮತ್ತು 15 ದಾಖಲೆಗಳನ್ನು ತೋರಿಸಿ ಅದರ ಮೇಲಿನ ಸಹಿಗಳನ್ನು ಗುರುತಿಸುವಂತೆ ಕೇಳಿದ್ದು ಸಾಕ್ಷಿ ಅದರ ಮೇಲಿರುವ ಸಹಿಗಳು ತನ್ನದು ಅಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲುಃ- ಪ್ರತಿವಾದಿ ನಂ.1 ರವರ ಪರ ಶ್ರೀ. ಕೆ ಎಸ್ ಜೆ ವಕೀಲರಿಂದ.**

ನಾನು ದಿನಾಂಕ 21-06-2005 ರಿಂದ 28-05-2007 ರವರೆಗೆ ಬೊಮ್ಮನಹಳ್ಳಿ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿ ಶಾಖಾ ಪ್ರಬಂಧಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಬೊಮ್ಮನಹಳ್ಳಿಯ ಬ್ಯಾಂಕಿನಲ್ಲಿ ಕೆಲಸ ಮಾಡುವುದಕ್ಕಿಂತ ಪೂರ್ವದಲ್ಲಿ ನಾನು ಹುಬ್ಬಳ್ಳಿಯಲ್ಲಿ ಕೆಲಸ ಮಾಡಿರುತ್ತೇನೆ. ದಿನಾಂಕ 28-05-2007 ರ ನಂತರ ನಾನು ಗುಜರಾತ ರಾಜ್ಯದಲ್ಲಿ ಸೇವೆ ಸಲ್ಲಿಸಿರುತ್ತೇನೆ. ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕ 31-05-2020 ರಂದು ಸೇವಾ ನಿವೃತ್ತಿ ಹೊಂದಿದ ಬಗ್ಗೆ ಮತ್ತು ಈಗ ಹೇಳಿದಂತೆ ಬೊಮ್ಮನಹಳ್ಳಿ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿಲ್ಲ. ನಾನು ಸದರಿ ಬ್ಯಾಂಕಿನಲ್ಲಿ ದಿನಾಂಕ 31-07-2017 ರಂದು ಕರ್ತವ್ಯ ನಿರ್ವಹಿಸಿಯೇ ಇಲ್ಲ ಎಂದು ಹೇಳಲು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ.

2. ಪ್ರತಿವಾದಿಯರಿಗೆ ಅಡಮಾನ ಸಾಲವನ್ನು ನನ್ನ ಅಧಿಕಾರ ಅವಧಿಯಲ್ಲಿಯೇ ನೀಡಿದ್ದು ಇತ್ತು ಎಂದರೆ ಸರಿ. ಸಾಲ ಮಂಜೂರು ಮಾಡುವಾಗ ಹಾಗೇ ಸಾಲ ಪಡೆದುಕೊಳ್ಳಲು ಇಚ್ಛಿಸುವವರ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿ ಕಾನೂನು

ವರದಿ ನೀಡಲು ನಮ್ಮ ಕಾನೂನು ಸಲಹೆಗಾರರಲ್ಲಿ ಕೇಳಿಕೊಳ್ಳುತ್ತೇವೆ ಎಂದರೆ ಸರಿ. ಹಾಗೇ ಪ್ರತಿವಾದಿಯರಿಗೆ ಸಾಲ ನೀಡುವಾಗ ನಾವು ಕಾನೂನು ಸಲಹೆಗಾರರ ಸಲಹೆ ಪಡೆದುಕೊಂಡಿರುತ್ತೇವೆ. ಆ ನಂತರ ನಾವು ಅಡಮಾನ ಪತ್ರವನ್ನು ಉಪನೋಂದಣಾಧಿಕಾರಿಯವರಲ್ಲಿ ನೋಂದಣಿ ಮಾಡಿಸಿರುತ್ತೇವೆ ಎಂದರೆ ಸರಿ. ಹಾಗೇ ಅಡಮಾನ ಪತ್ರ ನೋಂದಣಿಯಾದ ನಂತರ ಅದರ ಮೂಲ ದಾಖಲೆಯನ್ನು ನಮ್ಮ ಬ್ಯಾಂಕಿನಲ್ಲಿ ಇಟ್ಟುಕೊಂಡು ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ. ವಾದಿಯರು ಈ ದಾವೆಯಲ್ಲಿ ಯಾವ ಯಾವ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತಾರೆ ಎಂದು ತಿಳಿದುಕೊಂಡಿಲ್ಲ. ನಿಪಿ-1 ಇದು ಮೂಲ ದಾಖಲೆ ಅಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಎಷ್ಟು ಹಣ ಸಾಲ ನೀಡಿದ್ದು ಇತ್ತು ಎಂದು ನೆನಪಿಗೆ ಬರುತ್ತಿಲ್ಲ. ನಿಪಿ-1, 12, 14 ಮತ್ತು 15 ದಾಖಲೆಗಳ ಮೇಲೆ ಇರುವ ಸೀಲು, ಸಿಕ್ಕೆ ನಮ್ಮ ಬ್ಯಾಂಕಿನದು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಾಲವನ್ನು ಬೆಳೆ ಸಾಲ ಮತ್ತು ಭೂಮಿಯ ಅಭಿವೃದ್ಧಿಯ ಉದ್ದೇಶಕ್ಕಾಗಿ ನೀಡಿರುತ್ತೇವೆ. ಬೆಳೆ ಸಾಲ ಒಂದು ವರ್ಷದ ಅವಧಿಗೆ ಮತ್ತು ಭೂಮಿಯ ಅಭಿವೃದ್ಧಿಯ ಸಾಲ 5 ವರ್ಷದ ಅವಧಿ ಅದು ಬದಲಾವಣೆಯಾಗುತ್ತಾ ಬರುತ್ತದೆ. ಸದರಿ ಸಾಲವನ್ನು ಕಂತಿನ ಮೇಲೆ ಕೊಟ್ಟಿದ್ದು ಇತ್ತು. ಪ್ರತಿವಾದಿಯರಿಗೆ ಹಾಗೇ ಕಂತಿನ ಮೇಲೆ ಒಟ್ಟು ಎಷ್ಟು ಹಣ ಸಾಲ ನೀಡಿರುತ್ತೇವೆ ಎಂದು ನೆನಪಿಲ್ಲ. ಅದೇ ರೀತಿ ಒಟ್ಟು ಎಷ್ಟು ಕಂತು ಮೇಲೆ ಹಣ ಕೊಟ್ಟಿರುತ್ತೇವೆ ಎಂದು ನೆನಪಿಲ್ಲ. ಹಾಗೇ ಹಣ ಕೊಟ್ಟ ನಂತರ ನಮ್ಮ ಬ್ಯಾಂಕಿನವರು ಸಾಲದ ಹಣ ಮರುಪಾವತಿಗಾಗಿ ಕಂತು ನೀಡಿದ್ದು ಇತ್ತು. ಹಾಗೇ ಎಷ್ಟು ಕಂತಿನಲ್ಲಿ ಹಣ ತುಂಬಬೇಕು ಎಂಬ ಬಗ್ಗೆ ಕರಾರು ಆದ ಬಗ್ಗೆ ನನಗೆ ಗೊತ್ತಿಲ್ಲ. ಹಾಗೇ ಸಾಲ ಮಂಜೂರು ಹಾಗೂ ಮರುಪಾವತಿಯ ದಾಖಲೆ ನಾನೇ ನನ್ನ ಅವಧಿಯಲ್ಲಿ ತಯಾರಿಸಿದ್ದು ಇತ್ತು ಎಂದರೆ ಸರಿ. ನಿಪಿ-1 ರಂತೆ ಪ್ರತಿ 6 ತಿಂಗಳಿಗೆ ಒಂದು ಕಂತು ನಿಗಧಿಪಡಿಸಿದ್ದು ಇತ್ತು. ಹಾಗೇ ಎಷ್ಟು ಕಂತು ಮತ್ತು ಕೊನೆಯ ಕಂತು ಯಾವಾಗ ಎಂದು ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಕಂತಿನ ಹಣ ಎಷ್ಟು ಮತ್ತು ಕೊನೆಯ ಕಂತು ಎಷ್ಟು ಮೊತ್ತದ್ದು ಎಂದು ವಾದಿ ಬ್ಯಾಂಕಿನವರು ಹಾಜರುಪಡಿಸಿದ

ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಸರಿ. ಪ್ರತಿವಾದಿಯರ ಸಾಲದಲ್ಲಿ ಎಓಡಿ ಪಡೆದುಕೊಂಡಿಲ್ಲ. ಕರಾರಿನ ಮೇಲೆ ಮಾತ್ರ ಸಾಲ ಕೊಟ್ಟಿರುತ್ತೇವೆ. ಪ್ರತಿವಾದಿಯರು ತಾವು ಪಡೆದುಕೊಂಡ ಸಾಲವನ್ನು ಮರುಪಾವತಿ ಮಾಡಿದ್ದರೂ ಸಹ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನಲ್ಲಿ ಇದ್ದ ಸಾಲವನ್ನು ತೀರಿಸಿದ ನಂತರ ಬ್ಯಾಂಕಿನವರು ಬೇಬಾಕಿ ಪ್ರಮಾಣ ಪತ್ರ ನೀಡಿದ್ದು ಅದರ ಆಧಾರದ ಮೇಲಿಂದ ಪ್ರತಿವಾದಿಯರು ಬೇರೆ ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೇ ನಮ್ಮ ಬ್ಯಾಂಕಿನವರು ಮೂಲ ದಾಖಲೆಗಳನ್ನು ಬಚ್ಚಿಟ್ಟು ಈ ದಾವೆಗೆ ಅನುಕೂಲವಾಗುವ ರೀತಿಯಲ್ಲಿ ಕಾಗದ ಪತ್ರ ತಯಾರಿಸಿ 1 ನೇ ಪ್ರತಿವಾದಿಯ ಮೇಲೆ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು ಹಾಗೂ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿ ಬ್ಯಾಂಕಿಗೆ ಅನುಕೂಲವಾಗುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.